ಮುಗುಳ್ನಗುತ್ತಲೇ ಸೋಜಪ್ಪ ಐನೂರರ ಎರಡು ನೋಟುಗಳನ್ನು ತೆಗೆದು ಅವರ ಕೈಗಿಟ್ಟು, 'ಆ ಏಸುಸ್ವಾಮಿ ನಿಮಗೆ ಒಳ್ಳೇದು ಮಾಡಲಿ' ಎನ್ನುತ್ತ ಹೊರಟು ಹೋದರು.

ನಂಜುಂಡನಿಗೆ ಇದು ಯಾಕೊ ಸರಿ ಬರಲಿಲ್ಲ. ದೇವಪ್ಪ ಒಂದು ನೋಟನ್ನು ಅವನ ಕೈಗಿತ್ತಾಗ, 'ಬೇರೆಲ್ಲಾದ್ರೂ ಕೇಳ್ಬೋದಿತ್ತು ಕಣ್ಲಾ. ಮಾದೇವಿಗೆ ಗೊತ್ತಾದ್ರೆ ಪರಕೆ ಎತ್ಗೊಂಡು ಬತ್ತಾಳೆ' ಎಂದು ದುಗುಡದಿಂದಲೇ ಹೇಳಿದ. ದೇವಪ್ಪ ಧೈರ್ಯ ಹೇಳುತ್ತ, 'ಅದ್ಯಾಕಂಗಂತೀಯಾ? ಕೆಲಸಾ ಶುರುವಾಗಿ ಕೈಯಲ್ಲಿ ಕಾಸು ಬರುತ್ಲೂ ಕೊಟ್ಬಿಟ್ರೆ ಸೈಯಲ್ಲ. ಆಮ್ಯಾಕೆ ನೋಡ್ಕೊಳ್ಳಾಣ. ಈಗ ಈ ಹಳ್ಳೀಲಿ ಮತ್ಯಾರನ್ನ ಕೇಳ್ಬೇಕಿತ್ತು ಹೇಳು. ಎಲ್ಲಾ ಕೈಯಾಡಿಸೋರೆ.. ಅನುಕೂಲವಾಗಿರೋರು ನಮಗ್ಯಾಕೆ ಕೊಟ್ಟಾರು? ಸುಮ್ಕೆ ನಡಿ...' ಎಂದು ಹೊರಡಿಸಿಕೊಂಡು ಹೊರಟ. ಅವನು ಔಷಧಿ ಅಂಗಡಿಗೆ ನಡೆದರೆ ನಂಜುಂಡ ಸೀದಾ ಮನೆಗೆ ಬಂದ. ಅವನ ಹೆಂಡತಿ ಮಾದೇವಿ ಮನೆ ಕೆಲಸಕ್ಕೆ ಹೋಗಿದ್ದಳು. ಒಲೆಯ ಪಕ್ಕ ರಾಗಿಮುದ್ದೆ, ಬಸ್ಸಾರು ಮುಚ್ಚಿಟ್ಟಿದ್ದು ಕಾಣಿಸಿತು. ನೋಟನ್ನು ದೇವರ ಗೂಡಿನ ಮುಂದಿಟ್ಟು ಕೈಮುಗಿದು 'ಇದನ್ನ ಬೇಗ ತಲುಪಿಸೋಹಂಗ ಮಾಡವ್ವಾ ಗುಡೀರವ್ವಾ' ಎಂದು ಬೇಡಿಕೊಂಡ. ಕೈತೊಳೆದು ತಟ್ಟೆ ತೆಗೆದುಕೊಂಡು ಊಟ ಮಾಡಿದ. ರಾಗಿಮುದ್ದೆ, ಬಸ್ಸಾರು ಇನ್ನೂ ಬಿಸಿಯಾಗೇ ಇತ್ತು. ಹಾಗಾದರೆ ಮಾದೇವಿ ಹೋಗಿ ಬಹಳ ಹೊತ್ತಾಗಿರಲಿಕ್ಕಿಲ್ಲ... ಎಂದುಕೊಂಡ. ರುಚಿಕಟ್ಟಾಗಿದ್ದ ಬಸ್ಸಾರು ಚಪ್ಪರಿಸಿ ಉಣ್ಣುವಂತೆ ಮಾಡಿತು. ಎಷ್ಟೇ ಜಗಳಾಡಿದ್ರೂ ಮಾದೇವಿ ಕೈನ ಬಸ್ಸಾರು...ಬಾಡು ಎರಡರ ರುಚೀನೇ ರುಚಿ... ಎಂದುಕೊಳ್ಳುತ್ತ ನೀರು ಕುಡಿದು ತೇಗಿದ. ಎಲ್ಲಾದರೂ ಕೆಲಸ ಆರಂಭವಾಗುತ್ತಾ ಎಂದು ಕೇಳಲು ಮೇಸ್ತ್ರಿಯ ಮನೆಯತ್ತ ನಡೆದ.

ಇವರೆಲ್ಲ ವಾಸವಾಗಿರುವುದು ಅಪ್ಪಟ ಹಳ್ಳಿ. ಹೆಸರು ಬೇಡ ಬಿಡಿ. ಏಕೆಂದರೆ ಭಾರತದ ಲಕ್ಷಾಂತರ ಹಳ್ಳಿಗಳ ಪ್ರತಿನಿಧಿ ಇದು. ಇನ್ನೂ ಪಟ್ಟಣವಾಗುವ ದಿಸೆಯಲ್ಲಿ ಹೆಜ್ಜೆ ಇಟ್ಟಿರಲಿಲ್ಲ. ಹೆಗ್ಗಳಿಕೆ ಎಂದರೆ ದಾವಣಗೆರೆಯಿಂದ ಒಂದಷ್ಟು ಹತ್ತಿರವಿತ್ತು. ಒಟ್ಟಾರೆ ಇದ್ದ ಅರವತ್ತು ಮನೆಗಳಲ್ಲಿ ಹತ್ತು ದೊಡ್ಡ ಮನೆಗಳಿರಬಹುದು. ಅದರಲ್ಲಿ ಗೌಡರದು.. ಶೆಟ್ಟರದು.. ಮೇಸ್ತ್ರಿಯದು.. ತಾರಸಿ ಇರೋ ಕಾಂಕ್ರೀಟ್ ಮನೆಗಳು. ಉಳಿದವು ಸುಸ್ಥಿತಿಯಲ್ಲಿರುವ ನಾಡಹೆಂಚಿನ ಮನೆಗಳು. ಮಿಕ್ಕವೆಲ್ಲ ಕಡ್ಡಿಪೆಟ್ಟಿಗೆಗಳಂಥ ಗೂಡುಗಳು. ಕೆಲವೊಂದು ಸೋರುವವು.. ಬಿರುಕು ಬಿಟ್ಟವು.. ಸೋಗೆ ಹೊದಿಸಿದ್ದವು. ಅಲ್ಲಿಂದ ದಾವಣಗೆರೆಗೆ ಒಂದೇ ಬಸ್ಸು ಓಡುತ್ತಿತ್ತು. ಅರಳಿ ಮರದ ಬಳಿಯೇ ನಿಲ್ದಾಣ. ಅಲ್ಲೇ ಕೊಂಚ ಗೌಜಿ. ಕರೀಮನ ಸೈಕಲ್ ರಿಪೇರಿ ಅಂಗಡಿ,



ಕಿಟ್ಟಣ್ಣನ ಮೆಣಸಿನಕಾಯಿ, ಗಿರ್ಮಿಟ್ಟು, ಪೇಪರ್, ಹಣ್ಣು ಮುಂತಾಗಿ ಹಲವಾರು ಅಂಗಡಿಗಳು ಸಂಜೆಯೆಲ್ಲಾ ಗಲಗಲ ಅಂತಿದ್ದವು. ಅರಳಿಕಟ್ಟೆ ಸೋಮಾರಿಗಳಿಗೆ.. ಮುದುಕರಿಗೆ ಪ್ರಿಯವಾದ ಸ್ಥಾನವಾಗಿತ್ತು. ಹರೆಯದವರಿಗೆ ದಾವಣಗೆರೆಗೆ ಹೋಗುವ ಹುಚ್ಚು. ರಾಮ್ ಅಂಡ್ ಕೊ.. ಸರ್ಕಲ್ಲಿನ ಗಿರ್ಮಿಟ್ಟು, ನರ್ಗಿಸ್ ಚುರುಮುರಿ, ಮೆಣಸಿನಕಾಯಿ.. ಕೊಟ್ಟೂರೇಶ್ವರ, ಸಾಗರ್ ಬೆಣ್ಣೆದೋಸೆಗಳು ಬಾಯಲ್ಲಿ ನೀರೂರಿಸುವಂತೆ ಮಾಡುತ್ತಿದ್ದವು. ಓದಿದವರಿಗೆ ಬೆಂಗಳೂರಿನ ತಲಬು. ಹಳ್ಳಿಯಲ್ಲಿ ಗಣೇಶ, ಆಂಜನೇಯನ ದೇವಸ್ಥಾನ, ಮಸೀದಿಗಳಿದ್ದವು.

ಮಸೀದಿಯಲ್ಲಿ ಹರಕೆ ಹೊತ್ತ ಜನ ಉರುಸಿನ ದಿನ ಸಕ್ಕರೆ ಓದಿಸುತ್ತಿದ್ದರು. ಇದಕ್ಕೆ ಜಾತಿ, ಧರ್ಮದ ಗೊಡವೆ ಇರಲಿಲ್ಲ. ಗುಡ್ಡದ ಮೇಲಿನ ಗುಡೀರವ್ವನ ದೇವಸ್ಥಾನಕ್ಕೆ ಎಲ್ಲರೂ ನಡೆದುಕೊಳ್ಳುತ್ತಿದ್ದರು. ಕೋಳಿ, ಕುರಿಗಳ ಹರಕೆಯೂ ಸಲ್ಲುತ್ತಿದ್ದವು. ಗುಡೀರವ್ವನ